Kristu Jayanti College

AUTONOMOUS Bengaluru

Reaccredited 'A' Grade by NAAC | Affiliated to Bangalore University

*Special Issue*

ISSN: 2454-5813
Impact Factor: RJIF 3.6
Peer Reviewed Journal

# INTERNATIONAL JOURNAL OF KANNADA RESEARCH

## PART - B

### ಕನ್ನಡ ವಿಭಾಗ

## ರಾಷ್ಟ್ರೀಯ ವಿಚಾರ ಸಂಕಿರಣ
## “ಜಾನಪದ ಸಾಹಿತ್ಯ - ಸಾಂಸ್ಕೃತಿಕ ಚಿಂತನೆ”



TIRUPATI JOURNALS SOLUTIONS
NEW DELHI, INDIA

Kristu Jayanti College
AUTONOMOUS Bengaluru
Reaccredited 'A' Grade by NAAC | Affiliated to Bangalore University

## ಕನ್ನಡ ವಿಭಾಗ

### ರಾಷ್ಟ್ರೀಯ ವಿಚಾರ ಸಂಕಿರಣ

# "ಜಾನಪದ ಸಾಹಿತ್ಯ - ಸಾಂಸ್ಕೃತಿಕ ಚಿಂತನೆ"

## Part - B

ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಕೊತ್ತನೂರು ಪೋಸ್ಟ್, ಬೆಂಗಳೂರು-560 077
Tel: 080-28465611, 28465353, 28465770 | E-mail: info@kristujayanti.com
www.kristujayanti.edu.in

## Table of Contents


| S. No. | Chapters | Page No. |
|---|---|---|
| 21. | ಜನಪದ ಸಾಹಿತ್ಯಕ್ಕೆ ಪಾಶ್ಚಾತ್ಯರ ಕೊಡುಗೆ | 126-129 |
| 22. | ಜನಪದ ಭಾಷೆ ಮತ್ತು ಮೊಬೈಲ್ | 130-139 |
| 23. | ಐತಿಹಾಸಿಕ ಲಾವಣಿ: ಹಲಗಲಿ ಬೇಡರು | 140-143 |
| 24. | ಜಾನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯ | 144-148 |
| 25. | ಜಾನಪದ ಗಾದೆಗಳ ವಿಶ್ಲೇಷಣೆ | 149-153 |
| 26. | ಮಾಗಡಿ ತಾಲ್ಲೂಕಿನ ಜನಪದ ಅಡಿಗೆಗಳಲ್ಲಿ ಔಷಧ – ಆಹಾರದ ಸಂಗಮ ರೂಪಗಳು | 154-157 |
| 27. | ಜನಪದ ಕ್ರೀಡೆಗಳು | 158-162 |
| 28. | ಜನಪದ ಗಾದೆಗಳ ವಿಶ್ಲೇಷಣೆ | 163-167 |
| 29. | ಜನಪದ ಕ್ರೀಡೆಗಳು | 168-177 |
| 30. | ಜಾನಪದ ಕಾವ್ಯ ಮತ್ತು ಹೆಣ್ಣು | 178-182 |
| 31. | ಮಿಶನರಿಗಳ ಬರವಣಿಗೆಯಲ್ಲಿ ತುಳು ಜಾನಪದ: ಹತ್ತೊಂಬತ್ತನೇ ಶತಮಾನದ ದಾಖಲಾತಿಯ ಸ್ವರೂಪ | 183-190 |
| 32. | ಬೀದರ್ ಜಿಲ್ಲೆಯ ಜನಪದ ಗೀತೆ ಎಲ್ಲಮ್ಮನ ಕಾವ್ಯ : ಭಾಷಿಕ ವಿನ್ಯಾಸ | 191-194 |
| 33. | ಜನಪದ ಶಿಶುಪ್ರಾಸಗಳು : ಸ್ವರೂಪ ಮತ್ತು ವೈಶಿಷ್ಟ್ಯ | 195-199 |
| 34. | ಜನಪದ ದೈವಗಳ ಪರಂಪರೆ ಮತ್ತು ಪರಿಕಲ್ಪನೆ | 200-202 |
| 35. | ಜನಪದ ಗಾದೆಗಳ ವಿಶ್ಲೇಷಣೆ ಮತ್ತು ಬುದ್ಧತ್ವ | 203-207 |
| 36. | ಶಿಷ್ಟ ಹಾಗೂ ಜಾನಪದ ಮಹಾಭಾರತ – ಒಂದು ತೌಲನಿಕ ದೃಷ್ಟಿ | 208-211 |
| 37. | ಜನಪದ ವೈದ್ಯ : ಜನಸಾಮಾನ್ಯ | 212-218 |
| 38. | ಜಾನಪದ ರಂಗಭೂಮಿ | 219-222 |
| 39. | ಕನ್ನಡ ಜನಪದ ಗಾದೆಗಳಲ್ಲಿ ಜೀವನದೃಷ್ಟಿ | 223-227 |
| 40. | ಶಿಕ್ಷಣ ಮಾಧ್ಯಮವಾಗಿ ಜಾನಪದ | 228-233 |

# 39. ಕನ್ನಡ ಜನಪದ ಗಾದೆಗಳಲ್ಲಿ ಜೀವನದೃಷ್ಟಿ

ಗಾದೆ ಒಂದು ಸಾಲಿನ ಜನಪದ ಸಾಹಿತ್ಯ ಪ್ರಕಾರ, ಜಗತ್ತಿನ ತುಂಬಾ ಎಲ್ಲಾ ಭಾಷೆಗಳಲ್ಲೂ ಗಾದೆಗಳ ಸೃಷ್ಟಿಯನ್ನು ಕಾಣುತ್ತೇವೆ. ಗಾದೆಗಳು ಅನುಭವದ ನುಡಿಗಳು. ಒಂದೊಂದು ಅನುಭವದ ಹಿಂದೆ ಒಂದೊಂದು ಅನುಭವದ ಹಿಂದೆ ಒಂದೊಂದು ಘಟನೆ ಹುದುಗಿರುತ್ತದೆ. ಮಾತಿನಲ್ಲಿ ಬಳಕೆಯಾಗುವ ಸಹಜ ಸಾಹಿತ್ಯವೆಂದರೆ ಗಾದೆ. ಗಾದೆಯನ್ನು ಮಾತಿನಲ್ಲಿ ಬಳಸದ ಮಾನವರು ಇರಲು ಸಾಧ್ಯವಿಲ್ಲ. ಅದಕ್ಕಾಗಿ ಮಾತನಾಡುವ ಮನುಷ್ಯನಿರುವಲ್ಲಿ ಗಾದೆಗಳು ಇದ್ದೇ ಇರುತ್ತವೆ.

ನಿತ್ಯದ ಭಾಷೆಯಂತೆಯೇ ಸಹಜವಾಗಿ, ಅನಿವಾರ್ಯವಾಗಿ ಜನ–ಜೀವನದೊಡನೆ ಗಾದೆ ಬೆಳೆದು ಬಂದಿವೆ. ನಿತ್ಯ ಜೀವನದಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಅವಶ್ಯಕತೆಗಳಿಗನುಗುಣವಾಗಿ ಗಾದೆಗಳು ಪ್ರಯೋಗವಾಗಿರುತ್ತವೆ. ಈ ಅರ್ಥದಲ್ಲಿ ಇದೊಂದು ಜನಪ್ರಿಯವಾದ ಪ್ರಕಾರ ಕೂಡಾ ಹೌದು. ಗಾದೆ ಎಂಬ ಪದವು ಮೂಲತಃ ಸಂಸ್ಕೃತದ "ಗಾಥಾ" ಎಂಬುದರಿಂದ ನಿಷ್ಪನ್ನಗೊಂಡಿದೆ ಎಂದು ವಿದ್ವಾಂಸರು ಭಾವಿಸುತ್ತಾರೆ. ಸಂಸ್ಕೃತದ "ಗಾಥಾ"ವು ಪ್ರಾಕೃತದಲ್ಲಿ "ಗಾಹೆ" ಆಗಿ ಕನ್ನಡದಲ್ಲಿ "ಗಾದೆ" ಆಗಿರಬೇಕು. ಆದರೆ ಸಂಸ್ಕೃತದಲ್ಲಿ "ಗಾಥಾ"ವು ಛಂದಸ್ಸಿನ ಒಂದು ಜಾತಿಯಾಗಿದೆ. ಕನ್ನಡದಲ್ಲಿ ಇದರ ಅರ್ಥ ಬೇರೆಯಾಗಿದೆ ಎಂಬುದನ್ನು ಗಮನಿಸಬೇಕು. ಕನ್ನಡದಲ್ಲಿ ಗಾದೆಗೆ ಸಂವಾದಿಯಾಗಿ "ನಾಣ್ನುಡಿ" ಎಂಬ ಅಚ್ಚ ಕನ್ನಡ ಪದ ಬಳಕೆಯಲ್ಲಿದೆ. ಗಾದೆಯನ್ನು ಇಂಗ್ಲೀಷ್‌ನಲ್ಲಿ "Proverb" ಎಂದು ಕರೆಯಲಾಗುತ್ತದೆ.

ಗಾದೆಯ ಲಕ್ಷಣ ಕುರಿತು ಅನೇಕ ವಿದ್ವಾಂಸರು ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಗಾದೆಯು ಪರಂಪರಾಗತವಾದ ಮಾತೆಂಬುದನ್ನು ಮತ್ತು ಅದು ಅನುಭವಜನ್ಯವಾದುದೆಂಬುದನ್ನು ಬಹುತೇಕವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದು ಒಂದು ನಿರ್ಧಿಷ್ಟ ಸಂದರ್ಭದಲ್ಲಿನ ಮಾತುಕತೆಗೆ ಸಹಾಯಕವಾಗಿ ಬಳಕೆಯಾಗುತ್ತದೆ. ಈ ಸಮರ್ಥನಾ ವಾಕ್ಯವು ಆಕಾರದಲ್ಲಿ ಕಿರಿದಾಗಿದ್ದು, ಅರ್ಥದ ದೃಷ್ಟಿಯಿಂದ ವಿಸ್ತಾರವಾಗಿರುತ್ತದೆ. ಈ ಹಿನ್ನೆಲೆಯಲ್ಲಿಯೇ 'ಸಾಮಾನ್ಯ ಬಳಕೆಯಲ್ಲಿರುವ ಸಂಕ್ಷಿಪ್ತವಾದ ಸೂತ್ರ ಪ್ರಾಯವಾದ ಹೇಳಿಕೆ. ಅನುಭವ ಅಥವಾ ವೀಕ್ಷಣೆಯಿಂದ ಗೊತ್ತಾದ ಸರ್ವರಿಗೂ ಚಿರಪರಿಚಿತವಾದ ಕೆಲವು ಸತ್ಯಗಳನ್ನು ಅಭಿವ್ಯಕ್ತಿಸುವ ಸಂಕ್ಷಿಪ್ತ ವಾಕ್ಯ' ಎಂಬ ವಿವರವನ್ನು ಆಕ್ಸ್‌ಫರ್ಡ್ ನಿಘಂಟಿನಲ್ಲಿ ನೀಡಲಾಗಿದೆ. ಸರ್ವಾಂಟಿಸನು 'ದೀರ್ಘ ಅನುಭವದ ಮೇಲೆ ಕಟ್ಟಿದ ಸಂಕ್ಷಿಪ್ತ ವಾಕ್ಯ' ಎಂದು ಗಾದೆಯನ್ನು ವಿವರಿಸಿದ್ದಾನೆ. ಲಾರೆಂಜನ ಪ್ರಕಾರ 'ಗಾದೆಗಳು ಶಬ್ದಗಳಲ್ಲಿ ಸಂಕ್ಷಿಪ್ತವಾಗಿದ್ದು, ಜ್ಞಾನದಲ್ಲಿ ಅಗಾಧವಾಗಿರುತ್ತವೆ'. ಬೆನ್ ಹಾಂನ ಪ್ರಕಾರ 'ಗಾದೆಗಳೆಂದರೆ ಬೀದಿಯಲ್ಲಿ ಸಿಕ್ಕುವ ಜ್ಞಾನ'. ರಸೆಲ್‌ಗೆ 'ಗಾದೆಯೆಂದರೆ ಹಲವರ ಜ್ಞಾನ ಮತ್ತು ಒಬ್ಬನ ವಿವೇಕ'. ಸಾಫೋಕ್ಲಿಸ್ ಹೇಳಿದ ಪ್ರಕಾರ 'ಹೆಚ್ಚು ಜ್ಞಾನವನ್ನು ಒಳಗೊಂಡ ಸಂಕ್ಷಿಪ್ತ ಹೇಳಿಕೆಯೇ ಗಾದೆ'. ಇವರೆಲ್ಲರ ಮಾತುಗಳನ್ನು ನೋಡಿದಾಗ ಗಾದೆಯು ಜನ ಸಮೂಹದಿಂದ ಮೂಡಿ ಬರುವುದು ಅಥವಾ ಜನರಿಂದ ಅದು ಸತ್ಯವೆಂದು ಅಂಗೀಕೃತವಾಗುವುದು ಅಗತ್ಯವೆಂಬ ಅಂಶ ಸ್ಪಷ್ಟವಾಗುತ್ತದೆ.

ಗಾದೆಗಳಲ್ಲಿ ಉಪಮೆ, ವಿರೋಧಾಭಾಸ ಮತ್ತು ಅತ್ಯುಕ್ತಿ ಮೊದಲಾದ ಅಲಂಕಾರಗಳು, ಪ್ರಾಸ, ಅನುಪ್ರಾಸ, ಪುನರಾವರ್ತನೆ, ಸಮತೂಕ ಮುಂತಾದ ವಿಶಿಷ್ಟ ಗುಣಗಳು ಅಡಕವಾಗಿರುತ್ತವೆ. ಉದಾಹರಣೆಗೆ 'ಕತೆಗೆ ಕಾಲಿಲ್ಲ' ಎಂಬ ಗಾದೆಯನ್ನು ಗಮನಿಸಬಹುದು. ಅದು ಅತ್ಯಂತ ಸಂಕ್ಷಿಪ್ತವಾಗಿದೆ. ವಿವೇಕಪೂರ್ಣವಾಗಿದೆ. ಪ್ರಾಸಬದ್ಧವಾಗಿದೆ ಮತ್ತು ನಿರೂಪಣೆಯಲ್ಲಿ ಸಮತೂಕವನ್ನು ಸಾಧಿಸಿದೆ. ಇಂಥ ಗುಣಗಳೇ ಗಾದೆಯ ಲಕ್ಷಣಗಳಾಗಿವೆ. 'ಗುಂಪಿನಲ್ಲಿ ಗೋವಿಂದ', ತಳ ನೋಡಿ ಪಾಯ ಹಾಕು', 'ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟ', 'ರಟ್ಟೆ ಮುರಿದು ರೊಟ್ಟಿ ತಿನ್ನು' ಮೊದಲಾದ ಗಾದೆಗಳಲ್ಲಿ ಈ ಲಕ್ಷಣಗಳನ್ನು ಕಾಣಬಹುದು.

ಗಾದೆಗಳು ಹಲವು ಬಗೆಯ ಕಾರ್ಯಗಳನ್ನು ಸಮಾಜದಲ್ಲಿ ನಿರ್ವಹಿಸುತ್ತವೆ. ಮುಖ್ಯವಾಗಿ ಅನಕ್ಷರಸ್ಥ ಸಮಾಜದಲ್ಲಿ ತಿಳುವಳಿಕೆ ನೀಡುವ ಕೆಲಸವನ್ನು ಅವು ನಿರಂತರವಾಗಿ ಮಾಡುತ್ತಾ ಬಂದಿವೆ. ಹಾಗೆ ಪರಂಪರಾನುಗತವಾದ ತಿಳುವಳಿಕೆಯನ್ನು ಅವು ಮತ್ತೆ ಮತ್ತೆ ಜನಗಳ ನೆನಪಿಗೆ ತರುವುದರಿಂದಾಗಿ, ಒಂದು ಬಗೆಯ ಸಾಮಾಜಿಕ ಹತೋಟಿಯನ್ನು ಸಾಧಿಸುತ್ತವೆ. ಎಷ್ಟೋ ಗಾದೆಗಳು ಬುದ್ಧಿಮಾತುಗಳಾಗಿರುವುದರಿಂದ, ಸಾಂಸ್ಕೃತಿಕ ಮೌಲ್ಯಗಳ ರಕ್ಷಣೆಯ ಕೆಲಸವೂ ಗಾದೆಗಳ ಮೂಲಕ

ನಡೆದು ಬಿಡುತ್ತದೆ. ಈ ಅರ್ಥದಲ್ಲಿ ಗಾದೆಗಳು ಸಾಂಸ್ಕೃತಿಕ ಮುಂದುವರಿಕೆಯ ಸಾಧನಗಳೂ ಹೌದು.

ಗಾದೆಗಿರುವ ಶಕ್ತಿ ಅಪಾರವಾದುದು. ಅದು ಎದುರಿನವರನ್ನು ತನ್ನ ಪ್ರಭಾವಕ್ಕೆ ಎಳೆದುಕೊಳ್ಳುತ್ತದೆ. ಅನುಭವವನ್ನು ಮುಂದಿಟ್ಟು, ಮಾತಿಗೆ ತೂಕ ತಂದಿಡುತ್ತದೆ. ಅದಕ್ಕಾಗಿ "ಮಾತು ಬಲ್ಲವನಿಗೆ ಜಗಳವಿಲ್ಲ" ಎನ್ನುವುದನ್ನು "ಗಾದೆ ಬಲ್ಲವನಿಗೆ ಜಗಳವಿಲ್ಲ" ಎಂದು ಹೇಳಬಹುದು. ಗಾದೆಗಳು ಒಬ್ಬನ ಸೃಷ್ಟಿಯಾದರೂ ಅಲ್ಲಿರುವ ಅನುಭವ ಸಾರ್ವಜನಿಕವಾದುದು. ಹೀಗಾಗಿ ಗಾದೆಗಳನ್ನು ಜನ ಒಪ್ಪಿಕೊಳ್ಳುತ್ತಾರೆ. ಸೃಷ್ಟಿಯ ಶಕ್ತಿಯುಳ್ಳವನು. ಹೊಸ ಗಾದೆಗಳ ನಿರ್ಮಾಣವನ್ನು ಮಾಡುತ್ತಾನೆ. ಜನ ಸ್ವೀಕರಿಸಿ, ಬಳಸಲು ತೊಡಗಿದರೆ ಅದು ಗಾದೆಯಾಗಿ ಅಧಿಕೃತವಾಗಿ ಪ್ರಚಾರ ಹೊಂದುತ್ತದೆ.

## ಕೃಷಿ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಗಾದೆಗಳು

ಗಾದೆಗಳೆಂದರೆ ಜನಪದದ ಶ್ರೀಮಂತಿಕೆ, ಜೀವನಾನುಭವದಲ್ಲಿ ಗಳಿಸಿಟ್ಟ ಸವೆಯದ ಸಂಪತ್ತು. ನಮ್ಮ ಸಮಾಜದಲ್ಲಿ ಮುಕ್ಕಾಲು ಭಾಗವನ್ನು ಆಕ್ರಮಿಸಿಕೊಂಡಿರುವ ಕೃಷಿಕರ ಮಹಾನುಭವ ಗಾದೆಗಳನ್ನು ಹುದುಗಿಕೊಂಡಿದೆ. ಈ ಮಹಾನುಭವವನ್ನು ಕೃಷಿಕ ಸಂತಾನಕ್ಕೆ ಧಾರೆಯೆರೆಯುತ್ತಾ ಬಂದಿದೆ. ಈ ಗಾದಾ ಸಮುಚ್ಚಾಯ ನಾಡಿಗೆ ಹೆಚ್ಚಿನ ಸಂಪತ್ತನ್ನು ಒದಗಿಸಿಕೊಡುವ ಪರಿಶ್ರಮ ಕೃಷಿಕನಾದರೆ, ಅದರ ಮೌಲ್ಯ ಮಾಪನವನ್ನು ಹದಗೊಳಿಸುವ ಪರಿಶ್ರಮ ವ್ಯಾಪಾರಿಯದು. ಕೃಷಿಕನಿಗೆ ನೀಡಿದ ಸಲಹೆಗಳಲ್ಲಿ ಮೊದಲ ಪಾಠದಂತಿರುವ ಒಂದೆರಡು ಗಾದೆಗಳನ್ನು ಇಲ್ಲಿ ಅವಲೋಕಿಸೋಣ.

"ಆರಂಭ ವರುಷ, ವ್ಯಾಪಾರ ನಿಮಿಷ" ಕಾಳು, ಕಾಯಿಪಲ್ಲೆ ಮೊದಲಾದವುಗಳನ್ನು ಬೆಳೆಯಲು ಕೃಷಿಕನು ವರ್ಷದ ಹನ್ನೆರಡೂ ತಿಂಗಳು ದುಡಿಯಬೇಕಾಗುತ್ತದೆ. ಅವನು ಬೆಳೆದ ಪಸಲು ಮಾಸದಂತೆ ಜೋಪಾನವಾಗಿ ಪೇಟೆಗೆ ತರುತ್ತಾನೆ ; ಮಾರಾಟಕ್ಕಾಗಿ, ಆದರೆ ಪೇಟೆಯಲ್ಲಿ ಧಾರಣಿ ಹೇಗಿದ್ದರೂ ತನ್ನ ಬದುಕನ್ನು ಕೊಡದೆ ಗತ್ಯಂತರವಿಲ್ಲ. ಪೇಟೆಗೆ ಬರುವ ಬದುಕು ಬಹಳವಾದಾಗ ಧಾರಣಿ(ಬೆಲೆ) ಸಹಜವಾಗಿಯೇ ಇಳಿಯುತ್ತದೆ, ಧಾರಣಿ ಇಳಿದಂತೆ, ವ್ಯಾಪಾರಿ ಚೆಂಡಿಗೇರುತ್ತಾನೆ. ಕೃಷಿಕ ಗುಂಡಿಗೆ ಬೀಳುತ್ತಾನೆ. ಆದರೆ ಮರುಕ್ಷಣದಲ್ಲಿ ವ್ಯಾಪಾರಿಯ ಕಡೆಗೆ ಬರುವ ಪರಸ್ಥಳದ ಖರೀದಿಗಾರರು ಬರಿಗೈಯಲ್ಲಿ ಮರಳ ಬಾರದೆಂದು ಏರಿದ ಬೆಲೆಗೆ ಒಪ್ಪುತ್ತಾರೆ. ಕೃಷಿಕನ ಶ್ರಮಕ್ಕೆ ತಕ್ಕ ಪರಿಹಾರ ದೊರೆಯುವುದಕ್ಕೆ ಇಡಿಯ ವರುಷ ಸಾಲದೆ ಹೋಗುತ್ತದೆ. ಆದರೆ ವ್ಯಾಪಾರಿ ಮಾಲು ಖರೀದಿಸಿದ ಮರುಕ್ಷಣದಲ್ಲಿಯೇ ಇಮ್ಮಡಿ ಮುಮ್ಮಡಿ ಲಾಭ ಪಡೆಯುತ್ತಾನೆ. ಮೊದಲೇ ಬಡವನಾಗಿದ್ದ ಕೃಷಿಕನು ಕಡುಬಡವನಾಗುತ್ತಾನೆ".

"ಅಂಗೈ ಹಾಗೆ ಹೊಲ ಮಾಡಿದರೆ ಮುಂಗೈ ತುಂಬ ತುಪ್ಪ".

"ಆಳವಾಗಿ ಅಗೆದರೆ ನೀಳವಾಗಿ ಬೆಳೆಯುವುದು".

"ಆದರೆ ಒಂದು ಅಡಕೆಮರ, ಹೋದರೆ ಒಂದು ಗೂಟಡಿಕೆ".

ಕಳೆಗಳನ್ನು ಸಮೂಲ ನಾಶಗೊಳಿಸಿ ನೆಲಸಮ ಮಾಡುವುದೇ ಅಂಗೈ ಹಾಗೆ ಹೊಲ ಮಾಡು ಎನ್ನುವುದರ ಭಾವಾರ್ಥ. ಸಮಪಾತಿ ಮಾಡುವ ಮೊದಲು ಭೂಮಿಯನ್ನು ಆಳವಾಗಿ ಅಗೆದು ಸತ್ವಯುತ ಮಣ್ಣು ಮೇಲೆದ್ದು ಬರುವಂತೆ ಮಾಡಬೇಕಾಗಿರುವುದು. ಅಂಥ ನೆಲದಲ್ಲಿ ಬಂದ ಫಸಲು ಎತ್ತರವಾಗಿ ಬೆಳೆದು ನಿಲ್ಲುತ್ತದೆ. ಅದು ಮುಂಬರುವ ಕಾಲದಲ್ಲಿ ಎಡೆಗೊಂಡು ಬರುವ ತುಪ್ಪದೂಟ.

"ಉಣ್ಣಬೇಕಾದರೆ ಎಮ್ಮೆ ಕಟ್ಟು, ಕರು ಬೇಕಾದರೆ ಆಕಳು ಕಟ್ಟು" ಅಚ್ಚ ಕೃಷಿಕನು ಒಂದು ಬೇಡಿ ಇನ್ನೊಂದು ಬೇಡ ಎನ್ನುವುದಿಲ್ಲ. ಎರಡೂ ಬೇಕೆನ್ನುವ ಭಂಟ. ಉಣ್ಣಲು ಹಾಲೂ ಬೇಕು. ಎಮ್ಮೆಗೆ ಕರುವೂ ಬೇಕು ಅಲ್ಲವೇ ? ಅವನಿಗೆ ಹಾಲು ಅನಿವಾರ್ಯವಾದಂತೆ ಕರುವೂ ಅನಿವಾರ್ಯವಾಗಿದೆ. ಏಕೆಂದರೆ, "ಎತ್ತಿಲ್ಲದವನಿಗೆ ಎಡೆಯಿಲ್ಲ" ಇಲ್ಲಿ ಊಟದ ಎಡೆಯೂ ಹೌದು; ಹೊಲದೊಳಗಿನ ಬೆಳೆಯ ಎಡೆಯೂ ಅಹುದು.

"ಹತ್ತಿ ಬಿತ್ತಿ ಹಾಳಾದರು, ಕಡಲೆ ಬಿತ್ತಿ ಕಾಗೆಯನ್ನು ಕಾವಲಿಗಿಟ್ಟರು" ಎಂಬ ಗಾದೆಯು ಈಗಾಗಲೇ ನಷ್ಟದಲ್ಲಿರುವ ಕೃಷಿಕ ಮತ್ತೊಂದು ಕಷ್ಟಕ್ಕೆ ಸಿಕ್ಕಿಕೊಳ್ಳುವ ಎಚ್ಚರಿಕೆಯನ್ನು ನೀಡುತ್ತದೆ.

"ಸೇರು ವರಹ ಕೊಟ್ಟರೂ ಸೀರೆಯ ವ್ಯಾಪಾರ ಬೇಡ" ಎಂಬ ಗಾದೆಯು ಸೀರೆ ಮಾರಾಟಗಾರನನ್ನು ಕುರಿತಂತೆ ಹೇಳುವ

ರೀತಿಯನ್ನು ಗಮನಿಸಬೇಕು.

"ಇಟ್ಟು ಮರುಗುವ ನಾಯಿ, ಕೊಟ್ಟು ಮರುಗುವ ನಾಯಿ, ತಿಥಿ-ಮಿತಿಯಿಲ್ಲದೇ ತಿರುಗುವ ನಾಯಿ" ಈ ಗಾದೆ ಬಹುಶಃ ಸೀರೆಯ ವ್ಯಾಪಾರಿಯನ್ನು ಕುರಿತೇ ಹುಟ್ಟಿಕೊಂಡಿರಬಹುದೇನೋ.

**ಹೆಣ್ಣು ಮಕ್ಕಳ ಗಾದೆಗಳು :**

ಹೆಣ್ಣು ಹುಟ್ಟಿದ್ದು ತವರುಮನೆ, ಕೊಟ್ಟಿದ್ದು ಅತ್ತೆ ಮನೆ, ಹೆಣ್ಣು ತವರು ಮನೆಯಲ್ಲಿ ಮಗಳಾಗಿ ಹುಟ್ಟಿ, ಅತ್ತೆಯ ಮನೆಯಲ್ಲಿ ಸೊಸೆ, ಹೆಂಡತಿ, ತಾಯಿಯಾಗಿ ಆಕೆ ಜೀವಿತದಲ್ಲಿ ನಾಲ್ಕು ಅವತಾರಗಳನ್ನು ತೊಡುತ್ತಾಳೆ. ಹೆಚ್ಚಿನ ಸಾಧಕ-ಭಾದಕಗಳನ್ನೆಲ್ಲಾ ಗಮನಿಸಿ, ಸಮಾಜವು ಒಂದು ನಿರ್ಣಯಕ್ಕೆ ಬಂದು, "ಒಲಿದರೆ ನಾರಿ ಮುನಿದರೆ ಮಾರಿ" ಎಂದು ಹೇಳಿಬಿಟ್ಟಿತು. ದಿವಸಕ್ಕೆ ಹಗಲು-ರಾತ್ರಿ ಇರುವಂತೆ ಹೆಣ್ಣಿಗೆ ನಾರಿ-ಮಾರಿ ಎಂಬ ಸ್ವರೂಪಗಳಿರುತ್ತವೆಂದು ಒಟ್ಟಿನಲ್ಲಿ ಹೇಳಬಹುದಾಗಿದೆ. ಆಕೆಗೆ ಒಲುಮೆ ಸ್ವಾದರಸವಾಗಿರುವಂತೆ ಒಲುಮೆ ಪಾದರಸವಾಗಿರುತ್ತದೆ.

ಹೆಣ್ಣಿನ ಕೈಹಿಡಿದವನು ಗಂಡನೆನಿಸಿದರೆ, ಆಕೆಯ ಹೊಟ್ಟೆಯಲ್ಲಿ ಹುಟ್ಟಿದವನು ಗಂಡು ಎನಿಸುವನು. ಗಂಡನಿಗೂ ಭೋಜ್ಯೇಶು ಮಾತೆಯೆನಿಸುವವಳಿಗೆ ಗಂಡು ಹೊಟ್ಟೆಯಲ್ಲಿ ಹುಟ್ಟಿದ ವೈರಿಯೆನಿಸುವುದುಂಟು.

"ಹತ್ತು ಗಂಡ್ಹಡೆದರೂ ಮತ್ತೆ ಬಂಜೆಂಬರು

ದಟ್ಟಿಯ ಉಡುವ ಧರಣಿಯ। ಹಡೆದರ ।

ಮಕ್ಕಳ ತಾಯೆಂದು ಕರೆವರು"

ಹತ್ತು ಗಂಡು ಮಕ್ಕಳಿಗೆ ಜನ್ಮವಿತ್ತರೂ ಹೆಣ್ಣು ಮಗುವನ್ನು ಹಡೆಯುವವರೆಗೆ ತಾಯಿ ಬಂಜೆಯೇ ಸರಿ. ಹೆಣ್ಣು ಹಡೆದವಳೇ ಮಕ್ಕಳ ತಾಯಿಯೆನಿಸುವಳೆಂದು ಗರತಿ ಹೇಳುತ್ತಾಳೆ. ಬಸುರಿಯೊಬ್ಬಳು ಹೆಣ್ಣು ಹುಟ್ಟಲೆಂದು ಹಾರೈಸಿದರೆ, ಗಂಡನಾದವನು ಗಂಡು ಹುಟ್ಟಲೆಂದು ಬಗೆಯುವನು. ಹಡೆಯುವ ಮೊದಲೇ ಗಂಡ-ಹೆಂಡಿರಲ್ಲಿ "ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸುವ ಹಾಗೆ" ಮತ ಭೇದವುಂಟಾಯಿತು.

ಒಬ್ಬ ತಾಯಿ ಹೇಳುತ್ತಾಳೆ " ಹೆಣ್ಣು ಹಡೆದು ಅಳಿಯನ ಪಾಲು, ಗಂಡು ಹಡೆದು ಸೊಸೆಯ ಪಾಲು". ಸೊಸೆಯಾಗಿ ಅತ್ತೆಯ ಮನೆಗೆ ಹೋದ ಮಗಳಿಗೆ ಅನಿಸುತ್ತದೆ. "ತಾಯಿ ಇದ್ದರೆ ತವರು ಹೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು". ಆದರೆ "ಗಂಜೀಯ ಕುಡಿದರೂ ಗಂಡನ ಮನೆಲೇಸು" ಎಂದು ಮೊದಲಗಿತ್ತಿ ಭಾವಿಸುವುದು ಗಂಡನ ಒಲುಮೆ ಗಳಿಸಿದ ಮೇಲೆ. ಆದರೆ ಅಲ್ಲಿಯವರೆಗೆ "ಹುಟ್ಟಿದ ಮನೆ ಹೋಳೀ ಹುಣ್ಣಿಮೆ, ಕೊಟ್ಟ ಮನೆ ಶಿವರಾತ್ರಿ" ಎಂದು ಮಿಡುಕುವ ಸಂದರ್ಭ ಅನೇಕರಿಗೆ ಬರುವುದೇನೂ ಸುಳ್ಳಲ್ಲ. ಅತ್ತೆಗೆ ಸಂಬಂಧಿಸಿದ ಈ ಗಾದೆಗಳನ್ನು ಮೆಲುಕು ಹಾಕಬಹುದು.

"ಅತ್ತೆ ಒಡೆದ ಗಡಿಗೆ ಹಳೆಯದು"

"ಕತ್ತೆಯಂಥ ಅತ್ತೆ, ಮುತ್ತಿನಂಥ ಗಂಡ"

"ಅತ್ತೆ ಸತ್ತು ಆರು ತಿಂಗಳಿಗೆ ಸೊಸೆ ಅತ್ತಳು"

"ಬೇಸತ್ತು ಬೇರೆಯಾದರೆ ಪಾಲಿಗೆ ಅತ್ತೇ ಬರಬೇಕೇ ?" ಎಂಬ ಗಾದೆ ಮಾತುಗಳನ್ನು ಗಮನಿಸಬಹುದು.

ಗಂಡನಿಗೆ ಹೆಂಡತಿಯಾಗಿ ಹೋದವಳು ಮಗುವಿಗೆ ತಾಯಿಯಾಗುವ ಸಂದರ್ಭಕ್ಕೆ "ನೆರೆದಾಗಿನ ಸುಖ ಹಡೆದಾಗ ಇಲ್ಲ" ಎಂಬ ಅನುಭವ ಪಡೆದಿರುತ್ತಾಳೆ. "ಗಂಡನಿಗೆ ಗಂಟು ತೋರಿಸಬೇಡ, ಮಕ್ಕಳಿಗೆ ಸಿಹಿ ತೋರಿಸಬೇಡ" ಎಂಬ ತಿಳುವಳಿಕೆ ಕೇಳ ಸಿಗುತ್ತದೆ. ತವರು ಮನೆಯ ಪರಿಸರಕ್ಕೂ ಅತ್ತೆಯ ಮನೆ ಪರಿಸರಕ್ಕೂ ಇರುವ ಭೇದವು ಸ್ಪಷ್ಟವಾಗಿ ಕಾಣಸಿಗುವುದು. ಹೇಗೆಂದರೆ, "ಗಂಡನ ಮನೆಯಲ್ಲಿ ಹಾಲು ಕುಡಿದದ್ದು, ತವರು ಮನೆಯಲ್ಲಿ ನೀರು ಕುಡಿದದ್ದು" ಆಕೆಗೆ ಸಮವೆನಿಸುತ್ತದೆ. ಅತ್ತೆಯ ಸ್ಥಾನಕ್ಕೇರಿದರೂ ತಾಯ್ತನದಲ್ಲಿದ್ದ ಸೊಸೆಯರ ಬಗೆಗೆ, ಒಂದು ನಿಲುವಿಗೆ ಬಂದು "ಮಗ ಮಲುಗುವುದಕ್ಕೆ ಹೋಗಿ ಕೆಟ್ಟರೆ, ಸೊಸೆ ಬೀಸುವುದಕ್ಕೆ ಹೋಗಿ ಕೆಟ್ಟಳು" ಎಂಬ ಎಚ್ಚರಿಕೆ ವಹಿಸುತ್ತಾಳೆ. ಮಕ್ಕಳನ್ನು ಬೆಳೆಸುವ ಕಲೆಯನ್ನು ಕಂಡು ಹಿಡಿದ ತಾಯಿ "ಮಕ್ಕಳ ಬಾಯಿಗೆ ಹಣ್ಣು ಕೊಟ್ಟು, ಮಣ್ಣು ಬಿಡಿಸಬೇಕು" ಎಂದು ಸಲಹೆ ನೀಡುತ್ತಾಳೆ. "ಮಗಳನ್ನು ಹೊಗಳಿ

ಬೆಳೆಸಬೇಡ, ಮಗನನ್ನು ತೆಗಳಿ ಬೆಳೆಸಬೇಡ" ಎಂದು ಉಪಾಯ ಹೇಳಿ ಕೊಡುತ್ತಾಳೆ".

**ಗಾದೆಯಾಧಾರಿತ ಕಥೆಗಳು:**

ಗಾದೆಗಳು ಮಾನವನ ವೈಚಾರಿಕ, ಭಾವನಾತ್ಮಕ ನೆಲೆಯಲ್ಲಿ ರೂಪುಗೊಂಡ ಜೀವನಾನುಭವದ ಗಟ್ಟಿಗಳು. ಒಂದೊಂದು ಗಾದೆಯೂ ಒಂದೊಂದು ವಿಶಿಷ್ಟ ಅನುಭವದ ಪಡೆದಿರುತ್ತದೆ. ಅಂದರೆ ಪ್ರತಿಯೊಂದು ಗಾದೆಯೂ ತನ್ನೊಡಲಲ್ಲಿ ಒಂದು ಕಥಾಬೀಜವನ್ನು ಮಡುಗಿಟ್ಟುಕೊಂಡಿರುತ್ತದೆ. ಈ ಮಾತಿಗೆ ಸಾಕ್ಷಿಯಾಗಿ ಅನೇಕ ಗಾದೆಗಳು – ಜನಪದ ಕಥಾ ಘಟಕಗಳನ್ನು ನಿದರ್ಶನವಾಗಿ ಹೊಂದಿರುವುದನ್ನು, ಹಾಗೆಯೇ ಕಥೆಗಳು ಗಾದೆಗಳ ಮೂಲಕ ತಮ್ಮ ಧೋರಣೆಗಳನ್ನು ಸ್ಪಷ್ಟಪಡಿಸುವುದನ್ನು ಕಾಣಬಹುದಾಗಿದೆ.

"ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು" ಎಂಬ ಗಾದೆಯನ್ನು ಒಂದು ಕಥೆ ತನ್ನ ಧ್ಯೇಯವಾಕ್ಯವನ್ನಾಗಿ ಸ್ವೀಕರಿಸಿದ್ದರೆ, ಪ್ರತಿಯಾಗಿ ಈ ಗಾದೆಯ ಒಡಲಲ್ಲಿ ಹುದುಗಿರುವ ಕಥಾಬೀಜವೊಂದನ್ನು ಉದಾಹರಣೆಯಾಗಿ ನೋಡಬಹುದಾಗಿದೆ.

"ಅರಸನ ಶಯ್ಯಾಗಾರವನ್ನು ಕಾಯುತ್ತಿರುವ ಸಹೋದರ (ಸಹಾಯಕ) ಮತ್ತು ಹಾವು" ಎಂಬ ಕಥೆಯಲ್ಲಿ, 'ರಾಜನು ಮನೆಯಲ್ಲಿ ಸರ್ಪ ಕಚ್ಚಿ ಸಾಯುವನು' ಎಂಬ ಹಕ್ಕಿಗಳ ಭವಿಷ್ಯ ಕೇಳಿದ ಪ್ರಧಾನಿಯು ಅರಸನನ್ನು ಉಳಿಸಲು, ಆತ ಮಲಗುವ ಕೋಣೆಯಲ್ಲಿ ಎಚ್ಚರದಿಂದ ಕಾಯುತ್ತ ಕುಳಿತನು. ರಾತ್ರಿ ಕಚ್ಚಲು ಬರುತ್ತಿರುವ ಹಾವನ್ನು ಕತ್ತರಿಸಿದನು. ಹಾವಿನ ವಿಷದ ಒಂದು ಹನಿ, ರಾಣಿಯ ಎದೆಯ ಮೇಲೆ ಬಿದ್ದಿತು. ಅದನ್ನು ನಾಲಿಗೆಯಿಂದ ತೆಗೆಯಲು ಹೋದಾಗ ರಾಣಿಗೆ ಎಚ್ಚರವಾಗಿ, ತನಗೆ ಕೆಡಿಸಲು ಬಂದನೆಂದು ಅಪವಾದ ಹೊರಿಸಿದಳು. ರಾಜನು ಪ್ರಧಾನಿಗೆ ಮರಣದಂಡನೆ ವಿಧಿಸಿದನು. ಚಾಂಡಾಲರು ಕತ್ತರಿಸಲು ಎತ್ತಿದ ಕತ್ತಿಗಳೆಲ್ಲ ಹೂ ಮಾಲೆಗಳಾಗಿ ಪ್ರಧಾನಿಯ ಕೊರಳಲ್ಲಿ ಬಿದ್ದವು.

ಈ ಕಥಾಘಟ್ಟವು "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು" ಎಂಬ ಗಾದೆಯನ್ನು ಹುಟ್ಟು ಹಾಕುತ್ತದೆ. ಮುಂದೆ ಈ ಗಾದೆಗೆ ನಿದರ್ಶನವಾಗಿ ಕೆಲವು ಘಟನೆಗಳನ್ನು ಬಿತ್ತರಿಸಲಾಗುತ್ತದೆ. ಚಾಂಡಾಲರು ಅರಸನಲ್ಲಿಗೆ ಬಂದು ಈ ಕೆಲವು ದೃಷ್ಟಾಂತಗಳನ್ನು ತಿಳಿಸುತ್ತಾರೆ. 1. ತನ್ನ ಮಗನನ್ನು ಹಾವಿನಿಂದ ಉಳಿಸಿದ ಮುಂಗುಸಿಯನ್ನು ತಪ್ಪಾಗಿ ತಿಳಿದುಕೊಂಡು ಅದನ್ನು ಕೊಲ್ಲಲಾಯಿತು. 2. ತಿಂದರೆ ಮುದುಕರು ಯುವಕರಾಗುವ ಹಣ್ಣನ್ನು ತಂದ ಗಿಳಿಗೆ, ತಪ್ಪು ಭಾವಿಸಿ ಕೊಂದರು. ಹಣ್ಣಿನಲ್ಲಿ ಹಾವು ವಿಷ ಬಿಟ್ಟಿತ್ತು. ಅದನ್ನು ತಿಂದವನು ಸಾಯಲು, ಗಿಳಿಯು ವಿಷದ ಹಣ್ಣನ್ನೇ ತಂದಿದೆ ಎಂದು ತಿಳಿದು ಅದನ್ನು ಕೊಲ್ಲಿಸಿದರು. 3. ಕೊಳದಲ್ಲಿಯ ವಿಷದ ನೀರನ್ನು ಕುಡಿಯದಂತೆ ಅರಸನಿಗೆ ಗಿಡುಗ ಅಡ್ಡಿಪಡಿಸಿತು. ಆದರೆ ತನಗೆ ನೀರು ಕುಡಿಯಲು ಆತಂಕವೊಡ್ಡಿತು ಎಂದು ಭಾವಿಸಿ, ಅದನ್ನು ತುಂಡರಿಸಿದನು.

ಈ ಎಲ್ಲಾ ತಪ್ಪುಗಳು ಜರುಗಿದ ನಂತರ ಪಶ್ಚಾತ್ತಾಪಪಡುವ ಕೊಲೆಗಡುಕರನ್ನು, ಕಥೆ ಪುನಃ "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು" ಎಂಬ ತತ್ವವನ್ನು ಬೋಧಿಸುತ್ತದೆ. ಹೀಗೆ ಗಾದೆಗಳು ಕಥಾಬೀಜಗಳನ್ನು ತಮ್ಮ ಒಡಲಲ್ಲಿ ಹುದುಗಿಸಿಟ್ಟುಕೊಂಡಂತೆ, ಕಥೆಗಳು ಗಾದೆಗಳನ್ನು ತಮ್ಮ ಧ್ಯೇಯ ವಾಕ್ಯಗಳಾಗಿ ಸ್ವೀಕರಿಸುವುದನ್ನು ಕಾಣುತ್ತೇವೆ.

ಇಂದಿನ ಯುವಜನತೆಗೆ ಗಾದೆಗಳ ಸ್ವರೂಪ ಮತ್ತು ವಿಸ್ತಾರವನ್ನು ತಿಳಿಸುತ್ತಾ ಮಾನವನ ನಿತ್ಯ ಬದುಕಿನಲ್ಲಿ ಗಾದೆಗಳು ಹೇಗೆ ಬಳಕೆಯಾಗುತ್ತವೆ ಎಂಬುದನ್ನು ಅರಿತು ಗಾದೆಮಾತುಗಳಿಗಿರುವ ವೈಶಾಲ್ಯತೆಯನ್ನು ಎತ್ತಿ ಹಿಡಿಯಬೇಕಾದ ಅನಿವಾರ್ಯತೆ ನಮ್ಮೆದುರಿಗಿದೆ. ಗಾದೆಗಳು ಅನುಭವದ ಜ್ಞಾನಭಂಡಾರ ಎಂಬುದನ್ನು ತಿಳಿಸಬೇಕಾಗಿದೆ. ಒಟ್ಟಾರೆಯಾಗಿ ಗಾದೆಗಳ ಲೋಕ ವಿಸ್ತಾರವಾದುದು. ಲೇಖನದ ಮಿತಿಯಲ್ಲಿ ಕೆಲವು ಗಾದೆಗಳ ಮಹತ್ವವನ್ನು ಹೇಳುವ ಪ್ರಯತ್ನವಾಗಿದೆ.

**-: ಪರಾಮರ್ಶನ ಕೃತಿಗಳು :-**


1. ಜಾನಪದ ಕೈಪಿಡಿ : ಸಂಪಾದಕರು, ಡಾ. ಎಚ್. ಜೆ. ಲಕ್ಕಪ್ಪಗೌಡ

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

1997

2. ಜಾನಪದ ಶೋಧ : ಪ್ರೊ. ಎ. ವಿ. ನಾವಡ,
ಅಸ್ಮಿತೆ ಪ್ರಕಾಶನ, ಮಂಗಳೂರು. 2015
3. ಜಾನಪದ : ಡಾ. ವೀರಣ್ಣ ದಂಡೆ, ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು – 560 018. 2015
4. ಸುವರ್ಣ ಜಾನಪದ
ಲೇಖನಗಳು : ಸಂ. ಡಾ. ವೀರಣ್ಣದಂಡೆ
ಡಾ. ಶ್ರೀಪಾದಶೆಟ್ಟಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಕನ್ನಡ ಭವನ, ಜೆ.ಸಿ.ರಸ್ತೆ, 2006.

**ಡಾ. ಶಾಂತರಾಜು,**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಸಂತ ಫ್ರಾನ್ಸಿಸ್ ಡಿ. ಸಾಲೆಸ್ ಕಾಲೇಜು,
**ಬೆಂಗಳೂರು – 560 100.**